**ಸಾಕ್ಷಿಯನ್ನು ದಿಃ 03.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಚಲಾಯಿಸಿಕೊಂಡು ಹೋಗುತ್ತಿದ್ದ ಮೋಟಾರ್ ಸೈಕಲ್ ನನಗೆ ಸೇರಿದ್ದು. ಈಗಲೂ ಆ ವಾಹನ ನನ್ನ ಬಳಿ ಇದೆ ಎಂದರೆ ಸಾಕ್ಷಿಯು ಲೋನ್ ಕಟ್ಟದ ಕಾರಣ ಫೈನಾನ್ಸ್ ಕಂಪನಿಯವರು ತೆಗೆದುಕೊಂಡು ಹೋಗಿರುತ್ತಾರೆ ಎನ್ನುತ್ತಾರೆ. ಅಪಘಾತ ಆದಾಗ ಬೆಳಕಿತ್ತು ಎನ್ನುತ್ತಾರೆ. ಅಪಘಾತ ಸ್ಥಳ ದ್ವಿಪಥ ರಸ್ತೆ ಎಂದರೆ ಸರಿ. ಆಟೋದವರು ಸರ್ಕಾರಿ ಹೌಸ್ ಕಡೆ ಬರುತ್ತಿದ್ದರು ಎಂದರೆ ಸರಿ. ನಾನು ರಸ್ತೆಯ ಮಧ್ಯಭಾಗದಲ್ಲಿ ವಾಹನ ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ರಸ್ತೆಯ ಎಡಭಾಗದಲ್ಲಿದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಎಡಕಾಲು, ಎಡಕೈಗೆ ಪೆಟ್ಟಾಗಿದೆ. ಆಟೋದಲ್ಲಿ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅಲ್ಲಿಂದ ಎ.ಆರ್. ಆಸ್ಪತ್ರೆಗೆ ಹೋಗಿರುತ್ತೇನೆ. ಕೆ.ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಅಪಘಾತ ಹೇಗಾಯಿತು ಎಂದು ಹೇಳಿದ್ದೇನೆ. ಎ.ಆರ್ ಆಸ್ಪತ್ರೆಯಲ್ಲಿ 14 ದಿನ ದಾಖಲಾಗಿದ್ದೆ. ಆನಂತರವೂ 2-3 ಬಾರಿ ದಾಖಲಾಗಿದ್ದೆ. ಎಡಗಾಲಿಗೆ ಶಸ್ತ್ರ ಚಿಕಿತ್ಸೆ ಆಗಿದೆ. ಎಡಗಾಲಿಗೆ ಹಾಕಿದ್ದ ರಾಡ್ ಮತ್ತು ಪ್ಲೇಟ್ ಅನ್ನು ತೆಗೆದಿದ್ದಾರೆ. ಕೊನೆಯದಾಗಿ 6-7 ತಿಂಗಳ ಹಿಂದೆ ಚಿಕಿತ್ಸೆಗೆ ಹೋಗಿದ್ದೆ. ಆಗ ರಾಡ್ ಮತ್ತು ಪ್ಲೇಟ್ ಅನ್ನು ಅಳವಡಿಸಿದ್ದಾರೆ. ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮತ್ತೆ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

2. ನನಗೆ ಮಧುರಾಮ್ ಎಂಬ ವೈಧ್ಯರು ಚಿಕಿತ್ಸೆ ನೀಡಿದ್ದಾರೆ. ಔಷಧಿ ಬಿಲ್ಲು ನಗದಾಗಿ ಪಾವತಿಸಿದ್ದೇನೆ. ನಾನು ಔಷಧಿ ಬಿಲ್ಲುಗಳನ್ನು ಸೃಷ್ಠಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲು ಬಸ್ ಡ್ರೈವರ್ ಆಗಿದ್ದೆ. ಈ ಬಗ್ಗೆ ಡಿ.ಎಲ್ ಇದೆ. ಎಂ.ಆರ್.ಐ ಕಾಲೇಜು ಬಸ್ಸನ್ನು ಚಲಾಯಿಸುತ್ತಿದ್ದೆ. ನನ್ನ ಡಿ.ಎಲ್ ಅನ್ನು ನಾನು ಆರ್.ಟಿ.ಓ ಗೆ ವಾಪಸ್ ನೀಡಿಲ್ಲ. ಗುಣಮುಖರಾದ ನಂತರ ಚಾಲನ ವೃತ್ತಿಯಲ್ಲಿ ಮುಂದುವರೆಯಬಹುದು ಎಂದರೆ ಸರಿಯಲ್ಲ. ಎಡಗಾಲನ್ನು ಮಡಿಚಲು ಆಗುವುದಿಲ್ಲ ಎನ್ನುತ್ತಾರೆ.

3. ನನ್ನ ತಂಗಿ ಪೋಲೀಸರಿಗೆ ಅಪಘತಾದ ಮರುದಿನ ದೂರು ನೀಡಿದ್ದಾರೆ. ಅಪಘಾತ ಪಡಿಸಿದ ಆಟೋದವರು ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ. ನಾನೇ ಸ್ಕಿಡ್ ಆಗಿ ಬಿದ್ದಿದ್ದು ಆನಂತರ ಆಟೋದವರನ್ನು ಶಾಮಿಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆಟೋಗೆ ಎಫ್.ಸಿ. ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ವಿಮಾ ಕಂಪನಿಯವರು ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.